ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU CITY UNIVERSITY

Office of the Registrar (Evaluation), Central College Campus, Dr. Ambedkar Veedhi,
Bengaluru – 560 001. E-mail: registrarevlubcu@gmail.com, Ph.No.080-22295559

ಸಂಖ್ಯೆ: ಬಿ.ಸಿ.ಯು./ಪ.ವಿ./01/UGC ಮಾರ್ಗಸೂಚಿ/2023–24/2606. ದಿನಾಂಕ: 28.04.2023

## ಅಧಿಸೂಚನೆ

**ವಿಷಯ:** ಯು.ಜಿ.ಸಿ ಮಾರ್ಗಸೂಚಿಯನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿಗಳು 3+2 ಹಾಗೂ 2+2 ವರ್ಷಗಳಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗಳಿಗೆ ಖಾಸಗಿ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ.

**ಉಲ್ಲೇಖ:**1. ಯು.ಜಿ.ಸಿ ಮಾರ್ಗಸೂಚಿ ಅಧ್ಯಯನ ಮಾಡಿ ಅನುಮತಿ ನೀಡುವ ಬಗ್ಗೆ ಪರಿಶೀಲಿಸಿ, ಸೂಕ್ತ ಶಿಫಾರಸು ಮಾಡಲು ನೇಮಿಸಿದ್ದ ಸಮಿತಿಯ ವರಧಿ ದಿನಾಂಕ 21.04.2023.

2. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 21.04.20203

******

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಲ್ಲಿ ಅಧ್ಯಯನ ನಡೆಸಿ ಯು.ಜಿ.ಸಿ ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಕೋರ್ಸನ್ನು ಪೂರ್ಣಗೊಳಿಸಿದ್ದರೂ ಸಹ ಕೆಲವು ವಿಷಯಗಳು ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸಮಯ ನೀಡುವ ಸಂಭಂಧ ವಿಶ್ವವಿದ್ಯಾನಿಲಯ ನೇಮಿಸಿದ್ದ ಸಮಿತಿಯು ಯು.ಜಿ,ಸಿ ಮಾರ್ಗಸೂಚಿಯನ್ನು ಪರಿಶೀಲಿಸಿ ಸ್ನಾತಕ ಕೋರ್ಸುಗಳ ವಿದ್ಯಾರ್ಥಿಗಳು 3+2 ಮತ್ತು ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿಗಳು 2+2 ವರ್ಷಗಳಲ್ಲಿ ತೇರ್ಗಡೆಯಾಗಬೇಕೆಂದು ನಿಯಮದಲ್ಲಿ ತಿಳಿಸಲಾಗಿದ್ದು ಹೆಚ್ಚುವರಿಯಾಗಿ ಒಂದು ವರ್ಷ ಸಮಯವಕಾಶ ನೀಡಲು ಕೆಲವು ನಿಬಂಧನೆಯೊಂದಿಗೆ ಶಿಫಾರಸು ಮಾಡಿದೆ.

ಸಮಿತಿಯು ಮಾಡಿರುವ ಶಿಫಾರಸುಗಳನ್ನು ಒಪ್ಪಿ ಈ ಕೆಳಕಂಡ ನಿಬಂಧನೆಯನ್ನು ಒಪ್ಪುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಒಂದು ವರ್ಷ (ಎರಡು ಸೆಮಿಸ್ಟರ್‌ಗಳ) ಸಮಯ ನೀಡಲಾಗಿದೆ, ಇದು 28.04.2023 ರಿಂದ ಜಾರಿಗೆ ಬರುತ್ತದೆ.

1. ಪ್ರತಿ ವಿದ್ಯಾರ್ಥಿಯ ಕೇಸನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಅರ್ಹತೆ ಹೊಂದಿದವರಿಗೆ ಅನುಮತಿ ನೀಡುವುದು.
2. ಹೆಚ್ಚುವರಿ ಸಮಯ ಪಡೆದು ಪರೀಕ್ಷೆ ಬರೆಯುವ ವಿದ್ಯಾರ್ಥಿಯನ್ನು ಖಾಸಗಿ ವಿದ್ಯಾರ್ಥಿಯೆಂದು ಪರಿಗಣಿಸಲಾಗುವುದು ಮತ್ತು ಈ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಯಾವುದೇ ರ್‍ಯಾಂಕ್‌ಗಳಿಗೆ ಪರಿಗಣಿಸಲು ಅರ್ಹತೆ ಹೊಂದಿರುವುದಿಲ್ಲ.
3. ಆಯಾ ಸಮಯದಲ್ಲಿ ಪಾವತಿಸಬೇಕಾದ ಪರೀಕ್ಷಾಶುಲ್ಕದ ಜೊತೆ ಸ್ನಾತಕ ಕೋರ್ಸುಗಳ ವಿದ್ಯಾರ್ಥಿಗಳು ರೂ.1,000/– ಮತ್ತು ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿಗಳು ರೂ.1,500/– ಹೆಚ್ಚುವರಿಯಾಗಿ ಶುಲ್ಕ ಪಾವತಿ ಮಾಡಬೇಕು.
4. ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಶುಲ್ಕಪಾವತಿಸಲು ಮತ್ತು ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ.
5. ಈ ಅಧಿಸೂಚನೆ ಯು.ಜಿ.ಸಿ ಹೊರಡಿಸುವ ಮಾರ್ಗಸೂಚಿಯಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಪ್ರತಿಗಳು:

1. ಮಾನ್ಯ ಕುಲಪತಿಗಳು/ ಕುಲಸಚಿವರು (ಆಡಳಿತ)/ ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – 01.
2. ಡೀನರು/ ವಿಭಾಗದ ಮುಖ್ಯಸ್ಥರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ. ಬೆಂಗಳೂರು – 01.
3. ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಂಶುಪಾಲರುಗಳು.
4. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ.